**CC 4467/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 4467/2023**

**ಸಿ ಡಬ್ಲೂ - 5**
**ಪಿ ಡಬ್ಲೂ - 4**

**ಸಾಕ್ಷಿಯ ಹೆಸರು - ಪವನ ಕುಮಾರ**
**ತಂದೆಯ ಹೆಸರು - ಸಮೀರ ಕುಲಕರ್ಣಿ**
**ವಯಸ್ಸು - 21 ವರ್ಷಗಳು**
**ಉದ್ಯೋಗ - ವಿದ್ಯಾರ್ಥಿ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 18-09-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ದಿಃ **12-12-2021** ರಂದು ನನ್ನ ತಾಯಿಯ ಸ್ನೇಹಿತರ ಮದುವೆ ಇದ್ದ ಕಾರಣ ನಾನು ಮತ್ತು ನನ್ನ ತಾಯಿ ಆ ದಿನ ಹುಬ್ಬಳ್ಳಿಗೆ ಹೋದೆವು. ದಿಃ **13-12-2021** ರಂದು ನಮದುವೆ ಮುಗಿಸಿಕೊಂಡು ರಾತ್ರಿ **09.30** ಗಂಟೆಗೆ ವಾಪಸ್ ಬಂದೆವು. ನನ್ನ ತಾಯಿ ಚಾಸಾ **-1** ರವರು ಆಟೋ ಚಾಲಕನಿಗೆ ಹಣ ಕೊಡುತ್ತಿದ್ದಾಗ ನಾನು ಮನೆಯ ಗೇಟ್ ಬೀಗ ತೆಗೆಯಲು ಹೋದೆ. ಸದರಿ ಗೇಟ್ ನ ಬೀಗ ಒಡೆದು ಡ್ರಮ್ ನಲ್ಲಿ ಹಾಕಿದ್ದರು. ನಾನು ಮತ್ತು ಚಾಸಾ **-1** ರವರು ಗಾಬರಿಗೊಂಡು ಮನೆಯ ಒಳಗಡೆ ಹೋಗಿ ನೋಡಿದೆವು. ನಮ್ಮ ಮನೆಯಲ್ಲಿದ್ದ ಅಲಮೇರಾ ಒಡೆದು ಅದರಲ್ಲಿನ ಬಟ್ಟೆಗಳನ್ನು ಚಲ್ಲಾಪಿಲ್ಲಿ ಮಾಡಿದ್ದರು. ಸದರಿ ಅಲಮೇರಾದಲ್ಲಿದ್ದ ಕೆಲವು ಬಟ್ಟೆ, ದೇವರ ಸಾಮಾನುಗಳು ಮತ್ತು ಒಡವೆಗಳನ್ನು ಕಳ್ಳತನ ಮಾಡಿದ್ದರು. ನನ್ನ ದೊಡ್ಡಮ್ಮ ಚಾಸಾ **-4** ರವರು ಶ್ರೀರಾಮ ಚಿಟ್ಸ್ ನಿಂದ ಬಿಡಿಸಿಕೊಂಡು ಬಂದಿದ್ದ ಬಂಗಾರದ ಶಾರ್ಟ ಚೈನ್ , ಲಾಂಗ್ ಚೈನ್, ಕಿವಿಯೋಲೆ ಮತ್ತು **3** ಉಂಗುರಗಳನ್ನು ಇಟ್ಟಿದ್ದರು. ಸದರಿ ಆಭರಣಗಳ ಒಟ್ಟು ತೂಕ **73** ಗ್ರಾಂ. ಇತ್ತು.

ಬೆಳ್ಳಿ ಸಾಮಾನುಗಳಾದ **2** ದೇವರ ವಿಗ್ರಹಗಳು, ದೀಪ ಮತ್ತು ಕಳಸ ಮತ್ತು ಒಂದು ಬೆಳ್ಳಿ ಗ್ಲಾಸ್ ಕಳ್ತನ ಆಗಿದ್ದವು. ನಂತರ ನಾನು ಮತ್ತು ನನ್ನ ತಾಯಿ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ. ನಂತರ ಪೋಲಿಸರು ನಮ್ಮ ಮನೆಯಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಸಿ ಎಂ., ವಕೀಲರಿಂದ**

ನನ್ನ ಹೇಳಿಕೆಯಲ್ಲಿ ಒಡವೆಗಳ ಡಿಸೈನ್ ಮತ್ತು ಮಾಡೆಲ್ ಗಳ ಮಾಹಿತಿಯನ್ನು ಹೇಳಿ ಬರೆಸಿಲ್ಲ. ಆ ದಿನ ನಮ್ಮ ಮನೆಯಲ್ಲಿ ಯಾವುದೇ ಕಳ್ಳತನ ಆಗಿಲ್ಲ ಅಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಬರೆದುಕೊಂಡ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ನನ್ನ ತಾಯಿಯ ಮಾತು ಕೇಳಿ, ನಾನು ಯಾವುದೇ ಹೇಳಿಕೆ ನೀಡದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.